ಕಾಯ್ದೆ 1966ರ ಪ್ರಕರಣ 11ಕ್ಕೆ ತಿದ್ದುಪಡಿ ಮಾಡಿ ಅಧ್ಯಾದೇಶವನ್ನು (ordinance) ಹೊರಡಿಸಲಾಗಿತ್ತು. ಸರ್ಕಾರ ಹೊರಡಿಸಿದ ಅಧ್ಯಾದೇಶವನ್ನು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಏಕ ಪೀಠ ನ್ಯಾಯಾಧೀಶರು ಸದರಿ ಅಧ್ಯಾದೇಶವನ್ನು ರದ್ದುಗೊಳಿಸಿದ್ದರು. ಈ ಆದೇಶದ ವಿರುದ್ಧ ರಾಜ್ಯ ಸರ್ಕಾರವು ಸಲ್ಲಿಸಿದ ಅಪೀಲ್ ಅರ್ಜಿಯನ್ನು ವಿಭಾಗೀಯ ಪೀಠವು ಎತ್ತಿ ಹಿಡಿದಿರುವುದು.

ಮೊಳಕಾಲ್ಮೂರು ಬಸ್ ನಿಲ್ದಾಣದಿಂದ ತಾಲ್ಲೂಕಿನ ಇತರೇ ಭಾಗಗಳಿಗೆ ರಾಜ್ಯ ರಸ್ತೆ ಸಾರಿಗೆ ಬಸ್ ಸೌಕರ್ಯ

621 - ಶ್ರೀ ಎನ್.ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೊಳಕಾಲ್ಮೂರು ಬಸ್ ನಿಲ್ದಾಣದಿಂದ ಪ್ರತಿದಿನ ಎಷ್ಟು ರಾಜ್ಯ ರಸ್ತೆ ಸಾರಿಗೆ ಬಸ್‌ಗಳು ತಾಲ್ಲೂಕಿನ ಇತರ ಭಾಗಗಳಲ್ಲಿ ಸಂಚರಿಸುತ್ತಿವೆ?*

ಆ) *ಮೇಲ್ಕಂಡ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೆ ರಾಜ್ಯ ರಸ್ತೆ ಸಾರಿಗೆ ಬಸ್ ಸೌಕರ್ಯವನ್ನು ಒದಗಿಸಲಾಗಿದೆಯೇ?*

ಇ) *ಮೊಳಕಾಲ್ಮೂರಿನಿಂದ ತಾಲ್ಲೂಕಿನ ಎಲ್ಲಾ ಭಾಗಗಳಿಗೆ ಹೆಚ್ಚು ಬಸ್ ಸೌಕರ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) 10 ಬಸ್‌ಗಳು.

ಆ) ಇಲ್ಲಾ.

ಇ) ಪ್ರಯತ್ನಿಸಲಾಗುವುದು.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳ ಸ್ಥಾಪನೆ

622 - ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಹಾಲಿ ಇರತಕ್ಕ ಅಂಗನವಾಡಿ ಕೇಂದ್ರಗಳೆಷ್ಟು?*

ಆ) *ಈ ತಾಲ್ಲೂಕಿನಲ್ಲಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆಯೇ?*

ಇ) *ಹಾಗಿದ್ದಲ್ಲಿ ಅದರ ಬಗ್ಗೆ ಪೂರ್ಣ ವಿವರ ನೀಡುವುದು?*

ಈ) *1997-98ರಲ್ಲಿ ಹೊಸದಾಗಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಈ ತಾಲ್ಲೂಕಿನ ಯಾವ ಯಾವ ಜಾಗಗಳಲ್ಲಿ ತೆರೆಯಲಾಗಿದೆ?*

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಂಸದೀಯ ವ್ಯವಹಾರಗಳು, ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು) :

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಹಾಲಿ 125 ಅಂಗನವಾಡಿ ಕೇಂದ್ರಗಳಿವೆ.

ಆ) -ಇಲ್ಲ-

ಇ) ಅನ್ವಯಿಸುವುದಿಲ್ಲ.

ಈ) 1997-98ರಲ್ಲಿ ಈ ತಾಲ್ಲೂಕಿನಲ್ಲಿ ಹೊಸದಾಗಿ ಯಾವುದೇ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಿರುವುದಿಲ್ಲ.

ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಂಗನವಾಡಿ ಕಟ್ಟಡಗಳ ಕೊರತೆ

624 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಂತ ಕಟ್ಟಡವಿಲ್ಲದೆ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ತೊಂದರೆಯು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಂತಹ ಕೇಂದ್ರಗಳು ಎಷ್ಟು ಇವೆ. ಮತ್ತು ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) -ಹೌದು-

ಆ) ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಕಟ್ಟಡ ತೊಂದರೆಯಿರುವ 25 ಕೇಂದ್ರಗಳು ಇರುತ್ತವೆ. ಈ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ 211 ಕೇಂದ್ರಗಳಲ್ಲಿ 117 ಕೇಂದ್ರಗಳಿಗೆ ಸ್ವಂತ ಕಟ್ಟಡ ಸೌಲಭ್ಯ ಒದಗಿಸಲಾಗಿದ್ದು, 69 ಕೇಂದ್ರಗಳು ಪಂಚಾಯತ್ ಕಟ್ಟಡ, ಸಮುದಾಯ ಭವನ ಹಾಗೂ ಶಾಲಾ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಐ.ಸಿ.ಡಿ.ಎಸ್. ಯೋಜನೆಯು ಜಿಲ್ಲಾ ಪಂಚಾಯತ್ ಯೋಜನೆಯಾಗಿರುತ್ತದೆ. ಕಟ್ಟಡ ಕಟ್ಟಲು ನಿವೇಶನವನ್ನು ಆಯಾ ಗ್ರಾಮ ಪಂಚಾಯತ್‌ನಿಂದ ಒದಗಿಸಬೇಕಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಕಟ್ಟಲು ಉದ್ದೇಶಿಸಲಾದ ಕಟ್ಟಡಗಳಿಗೆ ಇಲಾಖೆಯು ತನ್ನ ವಂತಿಗೆಯನ್ನು ನೀಡುತ್ತದೆ. ಪ್ರತಿ ತಾಲ್ಲೂಕಿನಲ್ಲಿ ನಿವೇಶನದ ಲಭ್ಯತೆಗನುಗುಣವಾಗಿ ಕಟ್ಟಡಗಳನ್ನು ಕಟ್ಟುವ ತೀರ್ಮಾನವು ಜಿಲ್ಲಾ ಪಂಚಾಯತ್‌ದ್ದಾಗಿರುತ್ತದೆ. ಪ್ರತಿ ಕಟ್ಟಡ ಕಟ್ಟಲು ರೂ. 30,000-00 ದಿಂದ ರೂ. 90,000-00 ತಗಲುವುದಿದ್ದು 1998-99ನೇ ಸಾಲಿನಿಂದ ಇಲಾಖಾ ವಂತಿಗೆಯನ್ನು ಈಗಿರುವ ರೂ.30,000 ದಿಂದ